ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

**ಪ್ರೊ. ಟಿ.ಡಿ. ಕೆಂಪರಾಜು**
ಕುಲಪತಿಗಳು

ಶ್ರೀ ದೇವರಾಜ್ ಅರಸ್ ಬಡಾವಣೆ
ಟಮಕ, ಕೋಲಾರ – 563 103
ದೂರವಾಣಿ : +91 8152 243150
+91 8152 243151
ಇ-ಮೇಲ್: vc@bnu.ac.in

ಸಂಖ್ಯೆ: ಬೆಂ.ಉ.ವಿ.ವಿ/ವಿ.ಸಿ.ಪಿ/ಪರೀಕ್ಷಾ ಮೌಲ್ಯಮಾಪನ/289/2019-20 ದಿನಾಂಕ: 04.12.2019

**ಸುತ್ತೋಲೆ**

**ವಿಷಯ: 2019-20ನೇ ಸಾಲಿನ ವಿವಿಧ ಪದವಿ ಪರೀಕ್ಷೆಗಳ (ಮೊದಲನೇ ಮತ್ತು ಮೂರನೇ ಸೆಮಿಸ್ಟರ್) ಮೌಲ್ಯಮಾಪನ ಕಾರ್ಯಕ್ಕೆ ಎಲ್ಲಾ ಅರ್ಹ ಶಿಕ್ಷಕರನ್ನು (ಅತಿಥಿ ಉಪನ್ಯಾಸಕರು ಸೇರಿದಂತೆ) ಕಳುಹಿಸಿಕೊಡುವ ಬಗ್ಗೆ.**

* * *

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ತಮಗೆ ತಿಳಿಸುವುದೇನೆಂದರೆ, ದಿನಾಂಕ 02.12.2019ರಂದು ನಡೆದ ಎಲ್ಲಾ ವಿಷಯಗಳ ಪದವಿ ಪರೀಕ್ಷಾ ಮಂಡಳಿ ಅಧಿಕೃತ ಸಭೆಯಲ್ಲಿ, 2019-20ನೇ ವರ್ಷದ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳ ಮೌಲ್ಯಮಾಪನ ಕಾರ್ಯವನ್ನು ದಿನಾಂಕ 07.12.2019ರಿಂದ ಪ್ರಾರಂಭಿಸಲು ತೀರ್ಮಾನಿಸಲಾಯಿತು.ಈ ಹಿನ್ನಲೆಯಲ್ಲಿ ತಾವು ತಪ್ಪದೇ ತಮ್ಮ ಕಾಲೇಜಿನ ಎಲ್ಲಾ ಅರ್ಹ ಅದ್ಯಾಪಕರನ್ನು (ಅತಿಥಿ ಉಪನ್ಯಾಸಕರು ಸೇರಿದಂತೆ) ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸೂಕ್ತ ನಿರ್ದೇಶಿಸಬೇಕೆಂದು ಕೋರಿಕೆ. ಅದರಲ್ಲೂ ಪ್ರಮುಖವಾಗಿ ಎಲ್ಲಾ ಅರ್ಹ ಇಂಗ್ಲೀಷ್ ಭಾಷೆ ಮತ್ತು ವಾಣಿಜ್ಯ ವಿಷಯದ ಅದ್ಯಾಪಕರನ್ನು ಪ್ರಾರಂಭದ ದಿನದಿಂದಲೇ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ತಿಳಿಸುವುದು.

ಮತ್ತೊಂದು ವಿಷಯವೇನೆಂದರೆ, ಯಾರಾದರೂ ಅತಿಥಿ ಉಪನ್ಯಾಸಕರು ನಿಗದಿತ ಅವಧಿಯ ಬೋಧನಾ ಅನುಭವವು ಈ ದಿನದಂದು ಪೂರ್ಣಗೊಂಡಿದ್ದರೆ, ಅಂತಹ ಅತಿಥಿ ಉಪನ್ಯಾಸಕರನ್ನು Onlineನಲ್ಲಿ ಮೌಲ್ಯಮಾಪನ ಕಾರ್ಯಕ್ಕೆ ನೊಂದಣಿ ಮಾಡಲು ತಿಳಿಸಿ, ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಲು ತಿಳಿಸುವ ಮೂಲಕ ಸಹಾಯ ಮಾಡಬೇಕೆಂದು ಕೋರಿಕೆ.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಕಳೆದ ಎರಡು ಪರೀಕ್ಷೆಗಳ ಫಲಿತಾಂಶಗಳನ್ನು ನಿಗದಿತ ವೇಳೆಯಲ್ಲಿ ಪ್ರಕಟಿಸಿ, ನಿಗದಿತ ದಿನಾಂಕಗಳಂದು ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದೆ. ಆದರೆ ಈ ಸಾರಿ ಎರಡು ಸೆಮಿಸ್ಟರ್‌ಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಬೇಕಾಗಿರುವುದರಿಂದ ಕಾಲೇಜುಗಳ ಎಲ್ಲಾ ಅರ್ಹ ಅದ್ಯಾಪಕರ ಭಾಗವಹಿಸುವಿಕೆ ಅತ್ಯಾವಶ್ಯಕ.

ಆದ್ದರಿಂದ ದಯಮಾಡಿ ತಾವು ಈ ವಿಚಾರದಲ್ಲಿ ಸಕ್ರಿಯ ಸಹಕಾರ ನೀಡಬೇಕೆಂದು ಕೋರಿಕೆ.

ಕುಲಪತಿಗಳು

ಕುಲಪತಿಗಳ ಕಾರ್ಯಾಲಯ
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ-ಕರ್ನಾಟಕ-563 103.

ಗೆ,

ಎಲ್ಲಾ ಪ್ರಾಂಶುಪಾಲರುಗಳು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳು

**ಪ್ರತಿಗಳು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ವೀದಿ, ಮಹಾರಾಣಿ ಕಾಲೇಜು ಎದುರು, ಬೆಂಗಳೂರು-560 001.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು-560 001.
3. ಕುಲಸಚಿವರು(ಮೌ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ-563 103.